ಕರ್ನಾಟಕ ರಾಜ್ಯ ಲಾಟರಿ ಯೋಜನೆ

1370 (1599) ಶ್ರೀ ಕೃಷ್ಣಮೂರ್ತಿ. ಕೆ.ಎಂ. (ಕಡೂರು): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಲಾಟರಿ ಯೋಜನೆಯಡಿ ದಿನಂಪ್ರತಿ ಡ್ರಾ ಮಾಡುವ ಮೂರು ನಂಬರ್ ಲಾಟರಿ ಯೋಜನೆಗೂ ಮತ್ತು ನಿಷೇಧಿತ ಮಟ್ಕಾ ಜೂಜು ದಂಧೆಯ ಎರಡು ನಂಬರ್ ಯೋಜನೆಗೂ ವ್ಯತ್ಯಾಸ ಏನು ಎಂದು ತಿಳಿಸುವರೇ;

ಆ) ಆನ್‌ಲೈನ್ ಲಾಟರಿ ಯೋಜನೆಯಿಂದ ರಾಜ್ಯ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯ ಮತ್ತು ಖರ್ಚು ಎಷ್ಟಿದೆ.

ಇ) ಲಾಟರಿ ಯೋಜನೆಯ ನಿರ್ದಿಷ್ಟ ಲಾಭದ ನಿರೀಕ್ಷೆಯಿಂದ ಭ್ರಮೆ ನಿರಸನ ಹೊಂದಿ ಸಾವಿಗೀಡಾದ ಮೃತ ಜನರ ಸಂಖ್ಯೆಗಳು ಎಷ್ಟು ಎಂಬ ಮಾಹಿತಿ ಸರ್ಕಾರ ನೀಡುವುದೇ?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಲಾಟರಿ (ರೆಗ್ಯೂಲೇಷನ್) ಆಕ್ಟ್ 1998ರನ್ವಯ ಪೂರ್ವ ಪ್ರಕಟಿತ ಸಂಖ್ಯೆ ಅಥವಾ ಒಂದಂಕಿ ಲಾಟರಿಯನ್ನು ನಿಷೇಧಿಸಲಾಗಿದೆ. ಕರ್ನಾಟಕ ರಾಜ್ಯ ಲಾಟರಿಯ ಮೂರು ಅಂಕಿಯ ಲಕ್ಕಿ 3 ಇದರಡಿ ಬರುವುದಿಲ್ಲ.

ಆ) ಆನ್‌ಲೈನ್ ಲಾಟರಿಯಿಂದ ಸರ್ಕಾರಕ್ಕೆ ಪ್ರತಿವರ್ಷ ಬರುವ ವರಮಾನ ಈ ಕೆಳಕಂಡಂತಿದೆ: (ನಿರೀಕ್ಷಿಸಿರುವ ಮೊತ್ತ)

1ನೇ ವರ್ಷ : ರೂ. 100 ಕೋಟಿ ಅಥವಾ ಮಾರಾಟದ ಶೇಕಡ 21 ಇದರಲ್ಲಿ ಯಾವುದೂ ಹೆಚ್ಚೋ ಅದು.

2ನೇ ವರ್ಷ : ರೂ.140 ಕೋಟಿ ಅಥವಾ ಮಾರಾಟದ ಶೇಕಡ 22 ಇದರಲ್ಲಿ ಯಾವುದು ಹೆಚ್ಚೋ ಅದು.

3ನೇ ವರ್ಷ : ರೂ.196 ಕೋಟಿ ಅಥವಾ ಮಾರಾಟದ ಶೇಕಡ 23.50 ಇದರಲ್ಲಿ ಯಾವುದು ಹೆಚ್ಚೋ ಅದು.

4ನೇ ವರ್ಷ : ರೂ.275 ಕೋಟಿ ಅಥವಾ ಮಾರಾಟದ ಶೇಕಡ 24 ಇದರಲ್ಲಿ ಯಾವುದು ಹೆಚ್ಚೋ ಅದು.

5ನೇ ವರ್ಷ : ರೂ.385 ಕೋಟಿ ಅಥವಾ ಮಾರಾಟದ ಶೇಕಡ 24.5 ಇದರಲ್ಲಿ ಯಾವುದು ಹೆಚ್ಚೋ ಅದು.

ಇ) ನಿರ್ದಿಷ್ಟ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ರಾಜ್ಯದಲ್ಲಿ ಪ್ಲೇವಿನ್ ಲಾಟರಿ

1371 (924) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಫ್ಲೇವಿನ್ ಲಾಟರಿ ಯಾವಾಗ ಪ್ರಾರಂಭ ಆಯಿತು?

ಆ) ರಾಜ್ಯಾದ್ಯಂತ ಇದಕ್ಕೆ ಸಂಪೂರ್ಣ ವಿರೋಧ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಇ) ಇದರಿಂದ ಮಾನಸಿಕ ಸ್ಥಿತಿಗತಿ ಉಂಟಾಗಿ ಹುಬ್ಬಾಸ್ಪತ್ರೆ ಸೇರಿರುವ ನೂರಾರುಜನರು ಸಾವಿನ ಸೆಣಸಾಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಈ) ಅನೇಕ ಜಿಲ್ಲೆಗಳಲ್ಲಿ ತಾಲ್ಲೂಕುಗಳಲ್ಲಿ ಮಹಿಳೆಯರು ಹಾಗೂ ಸಾರ್ವಜನಿಕರು ಪ್ರತಿಭಟನೆ ವಿರೋಧ ಮಾಡಿರುವುದು ಸರ್ಕಾರದ ಅರಿತಿಲ್ಲವೆ?

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಈ ಲಾಟರಿ ಯೋಜನೆಯನ್ನು ಕೈಬಿಡಲಾಗುವುದೆ?

ಊ) ಯಾವಾಗಿನಿಂದ ಕೈಬಿಡಲಾಗುವುದು?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಫ್ಲೇವಿನ್ ಸಂಸ್ಥೆಯು ಸಿಕ್ಕಿಂ ಸರ್ಕಾರ ಸೂಪರ್ ಲೋಟೊವನ್ನು ದಿನಾಂಕ:29.3.2002 ರಿಂದ ಹಾಗೂ ಕರ್ನಾಟಕ ಸರ್ಕಾರದ ಲಕ್ಕಿ 3 ಯೋಜನೆಯನ್ನು 14.8.2002 ರಿಂದ ಪ್ರಾರಂಭ ಮಾಡಿದೆ.

ಆ) ನಿರ್ದಿಷ್ಟ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ)ಈ) ನಿರ್ದಿಷ್ಟ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಊ) ಉದ್ಭವಿಸುವುದಿಲ್ಲ.

ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ

1372 (925) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ(ಅಣ್ಣಯ್ಯ) (ತುರುವೇಕೆರೆ): ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರಿಗೆ ಕೊಡುತ್ತಿದ್ದ ಅನುದಾನವನ್ನು ಮುಟ್ಟುಗೋಲು ಹಾಕಿಕೊಳ್ಳಲು ಕಾರಣವೇನು?

ಆ) ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳನ್ನು ಈ ರೀತಿ ಅವಮಾನ ಮಾಡಲು ಕಾರಣವೇನು;

ಇ) ಸರ್ಕಾರದ ಬೊಕ್ಕಸ ಖಾಲಿಯಾಗಿರುವುದು ನಿಜವೇ;

ಈ) ಹಾಗಿದ್ದಲ್ಲಿ ಶ್ವೇತ ಪತ್ರ ಹೊರಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಉ) ಈ ವರ್ಷದ ಆಯವ್ಯಯದಲ್ಲಿ ಹಿಂದಿನದನ್ನು ಸೇರಿಸಿಕೊಡಲಾಗುವುದೇ;

ಊ) ಈ ಹಣವನ್ನು ಯಾವ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲಾಗಿದೆ (ವಿವರ ಕೊಡುವುದು)?

ಶ್ರೀ ಆರ್.ಬಿ. ತಿಮ್ಮಾಪೂರ್ (ಯೋಜನಾ ಸಚಿವರು) :

ಅ) ಕರ್ನಾಟಕದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ, 120 ಕೋಟಿ ರೂ.ಗಳನ್ನು ಒದಗಿಸಿದ್ದು, ಇದರಲ್ಲಿ 31.10. ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.